ಶ್ರೀ ಪಿ. ಜಿ. ಆರ್. ಸಿಂಧ್ಯ (ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡೆಗಳ ಸಚಿವರು). —

ಅ) ಹೌದು.

ಆ) ವಿಶೇಷ ಘಟಕ ಯೋಜನೆಯ ಗುಂಪುಗೂಡಿಸಿದ ಸಂಪೂರ್ಣ ಮೊತ್ತವನ್ನು ಜಿಲ್ಲಾ ಪರಿಷತ್ತುಗಳಿಗೇ ವರ್ಗಾಯಿಸಲಾಗಿದೆ. ರಾಜ್ಯ ವಲಯದ ಕೆಲವು ಕಾರ್ಯಕ್ರಮಗಳ ಮೊತ್ತವು ಸಾಂಕೇತಿಕ ವಾಗಿದ್ದು, ಜಿಲ್ಲಾ ಪರಿಷತ್ತುಗಳಿಗೆ ವರ್ಗಾಯಿಸುವುದು ಸಾಧ್ಯವಿರುವುದಿಲ್ಲ.

ಶ್ರೀ ಪಿ. ಸಿ. ಮುನಿಸ್ವಾಮಪ್ಪ. —ಮಾನ್ಯ ಅಧ್ಯಕ್ಷರೆ, ವಿಶೇಷ ಘಟಕ ಯೋಜನೆಯ ಹಣವನ್ನು ಕೆಲವು ಇಲಾಖೆಗಳು ಅಂದರೆ ಕೃಷಿ ಇಲಾಖೆ, ಪಶುಸಂಗೋಪನೆ, ಮೀನುಗಾರಿಕೆ, ತೋಟಗಾರಿಕೆ, ಅರಣ್ಯ ಇಲಾಖೆ, ಇನ್ನೂ ಅನೇಕ ಇಲಾಖೆಗಳವರು ವಿಶೇಷ ಘಟಕ ಯೋಜನೆಯ ಹಣವನ್ನು ಖರ್ಚು ಮಾಡದೇ ಉಳಿಸಿಕೊಂಡಿರುವ ಅಧಿಕಾರಿಗಳ ಮೇಲೆ ಮಂತ್ರಿಗಳು ಕ್ರಮ ತೆಗೆದು ಕೊಳ್ಳುತ್ತಾರೆಯೇ ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಇಲಾಖೆಯ ಅಧಿಕಾರಿಗಳ ಮೇಲೆ ಅಷ್ಟೇ ಅಲ್ಲ, ಅದಕ್ಕೆ ಸಂಬಂಧ ಪಟ್ಟ ಎಲ್ಲರ ಮೇಲೂ ಕ್ರಮ ತೆಗೆದುಕೊಳ್ಳುತ್ತೇನೆ. ಈ ವಿಚಾರದ ಬಗ್ಗೆ ಮಾನ್ಯ ಬಸವಲಿಂಗಪ್ಪ ನವರು ಎತ್ತಿದಂಥ ಸಂದರ್ಭದಲ್ಲಿ ನಾನು ವಿವರವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ಸವಿೂಕ್ಷೆ ಮಾಡುತ್ತೇವೆ. ಸ್ಪೆಷಲ್ ಕಾಂಪೋನೆಂಟ್ ಸ್ಕೀಮಿನಲ್ಲಿ ಜಿಲ್ಲಾಪರಿಷತ್‌ಗೆ ಕೊಟ್ಟಿರತಕ್ಕ ಸ್ಕೀಮ್ ಜಾಸ್ತಿ ಇದೆ. ಅದನ್ನು ಇಂಪ್ಲಿಮೆಂಟ್ ಮಾಡಿದರೆ ಸಾಕು. ಉಳಿದಿರುವುದನ್ನು ಕೊಡುವ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು.—ಮಾನ್ಯ ಎನ್. ಹೆಚ್. ಗೌಡರ ಪೂರಕ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಸಮಯ ಕೇಳಿದ್ದಾರೆ.

ಶ್ರೀ ಎನ್.ಹೆಚ್. ಗೌಡ.—ಅಧ್ಯಕ್ಷರೆ, ನನಗೆ ನಿರ್ದಿಷ್ಟವಾದ ಅಂಕಿ ಸಂಖ್ಯೆಗಳು ಬೇಕಾಗಿಲ್ಲ. ಸಾಮಾನ್ಯವಾಗಿ, ಪರೋಕ್ಷವಾಗಿ ಉತ್ತರ ಕೊಟ್ಟರೆ ಸಾಕು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅಧ್ಯಕ್ಷರೇ, ಈ ಪ್ರಶ್ನೆಯ ಬಗ್ಗೆ ಎಲ್ಲಾ ತಾಲ್ಲೂಕುವಾರುಗಳಿಂದ ವಿವರಗಳನ್ನು ತರಿಸಬೇಕಾಗುತ್ತದೆ. ನಾನು ಇದರ ಬಗ್ಗೆ ಅಧಿಕಾರಿಗಳ ಜೊತೆ ಮಾತನಾಡಿ ಆ ದಿನಾಂಕ ವನ್ನು ಅವರಿಗೆ ತಿಳಿಸುತ್ತೇನೆ.

ಅಧ್ಯಕ್ಷರು —ಇಷ್ಟರೊಳಗೆ ತಾರೀಖಿನೊಳಗೆ ಉತ್ತರ ಬರಲಿಲ್ಲ ಅಂದರೆ ನಿಮ್ಮ ಊರಿಗೆ ಉತ್ತರವನ್ನು ಕಳುಹಿಸಿಕೊಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅಧ್ಯಕ್ಷರೇ, ಸಾಧ್ಯವಾದರೆ, ಅಧಿವೇಶನದ ಒಳಗಡೆಯೇ ಉತ್ತರ ಕೊಡುತ್ತೇನೆ.

ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಪರಿಸ್ಥಿತಿಯ ಬಗ್ಗೆ

೩೮೯. **ಶ್ರೀ ಆರ್.ಎನ್. ನಾಯ್ಕ** (ಭಟ್ಕಳ).—ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು ?

ಆ) ಕಳೆದ ವರ್ಷದಿಂದ ಈ ತನಕ ಪ್ರತಿ ತಾಲೂಕಿನಲ್ಲಿ ಎಷ್ಟು ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗಿದೆ ?

ಇ) ಎಷ್ಟು ಪಸತಿ ನಿಲಯಗಳಿಗೆ ಸ್ವಂತ ಕಟ್ಟಡ ಇದೆ ?

ಈ) ಮೆಟ್ರಿಕ್ ಪೂರ್ವ ವಸತಿನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ಆಹಾರಕ್ಕಾಗಿ ಖರ್ಚಾಗುವ ಹಣವೆಷ್ಟು ? ಮೆಟ್ರಿಕ್ ನಂತರದ ವಿದ್ಯಾರ್ಥಿಗೆ ಪ್ರತಿ ತಿಂಗಳಿಗೆ ಊಟಕ್ಕೆ ಸರ್ಕಾರವು ಖರ್ಚು ಮಾಡುತ್ತಿರುವ ಹಣವೆಷ್ಟು ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಮಾಜ ಕಲ್ಯಾಣ ಸಚಿವರು).—

ಅ) ಈ ಇಲಾಖೆಯಲ್ಲಿ ೧೯-೪-೮೮ಕ್ಕೆ ಅನ್ವಯಿಸುವಂತೆ ಒಟ್ಟು ೬೫೧ ಮೆಟ್ರಿಕ್ ಪೂರ್ವ ವಸತಿ ನಿಲಯಗಳಿಂ ಮತ್ತು ೬೭ ಮೆಟ್ರಿಕ್ ನಂತರದ ವಸತಿ ನಿಲಯಗಳು ಇವೆ.

ಆ) ೧೯೮೪-೮೫ನೆ ಸಾಲಿನಲ್ಲಿ ನೂರು ಮೆಟ್ರಿಕ್ ಪೂರ್ವ ವಸತಿನಿಲಯಗಳನ್ನು ತೆರೆಯಲಾಗಿದೆ ಅನಂತರ ೧೯೮೫-೮೬ರಿಂದ ೧೯೮೬-೮೭ ವರೆಗೆ ಯಾವುದೇ ವಸತಿ ನಿಲಯಗಳನ್ನು ಪ್ರಾರಂಭಿಸಿಲ್ಲ. ೧೯೮೭-೮೮ನೇ ಸಾಲಿನಲ್ಲಿ ೨೫ ಮೆಟ್ರಿಕ್ ಪೂರ್ವ ವಸತಿನಿಲಯಗಳನ್ನು ಆರಂಭಿಸಲಾಗಿದೆ. ಮತ್ತು ಈ ವರ್ಷ ೧೯-೪-೮೮ರ ವರೆಗೆ ಜಿಲ್ಲಾ ಪರಿಷತ್ ಮೂಲಕ ಒಟ್ಟು ೧೬ ಮೆಟ್ರಿಕ್ ಪೂರ್ವ ವಸತಿ ನಿಲಯಗಳನ್ನು ಆರಂಭಿಸಲಾಗಿದೆ.

೧೯೮೫ಕ್ಕೆ ಮೊದಲಂ ಮೆಟ್ರಿಕ್ ನಂತರದ ವಸತಿ ನಿಲಯಗಳು ಒಟ್ಟು ೬೫ ಇದ್ದು. ಅವುಗಳಲ್ಲಿ ೧೯೮೬-೮೭ನೇ ಸಾಲಿನಲ್ಲಿ ಬೆಂಗಳೂರು (ನಗರ)ದಲ್ಲಿದ್ದ ೧೦೦ ಸಂಖ್ಯಾಬಲದ ಒಂದು ಮೆಟ್ರಿಕ್ ನಂತರದ ವಸತಿ ನಿಲಯವನ್ನು ಹಾಗೂ ಕೋಲಾರ ಜಿಲ್ಲೆಯ ೧೫೫ ಸಂಖ್ಯಾಬಲದ ಒಂದು ಮೆಟ್ರಿಕ್ ನಂತರದ ವಸತಿ ನಿಲಯವನ್ನು ಎರಡೆರಡಾಗಿ ವಿಭಜನೆ ಮಾಡಿದ್ದರಿಂದ ಒಟ್ಟು ಸಂಖ್ಯೆಯಲ್ಲಿ ೨ ಮೆಟ್ರಿಕ್ ನಂತರದ ವಸತಿ ನಿಲಯಗಳು ಹೆಚ್ಚಾಗಿವೆಯಷ್ಟೆ ಆದರೆ ಹೊಸದಾಗಿ ೧೯೮೬ರಿಂದ ಈವರೆಗೆ ಯಾವ ಮೆಟ್ರಿಕ್ ನಂತರದ ವಸತಿ ನಿಲಯಗಳನ್ನು ಮಂಜೂರು ಮಾಡಿಲ್ಲ.

ಇ) ೨೧೦ ಮೆಟ್ರಿಕ್ ಪೂರ್ವ ವಸತಿ ನಿಲಯಗಳಿಗೆ ಮತ್ತು ೧೪ ಮೆಟ್ರಿಕ್ ನಂತರದ ವಸತಿ ನಿಲಯಗಳಿಗೆ ಸ್ವಂತ ಕಟ್ಟಡಗಳಿವೆ.

ಈ) ಮೆಟ್ರಿಕ್ ಪೂರ್ವ ವಸತಿ ನಿಲಯದ ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳಿಗೆ ೧೮೦ ನಂತೆ ಆಹಾರಕ್ಕಾಗಿ ಖರ್ಚು ಮಾಡಲಾಗುತ್ತಿದೆ ಮತ್ತು ಮೆಟ್ರಿಕ್ ನಂತರದ ವಸತಿ ನಿಲಯದ ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ರೂ. ೧೫೦-೦೦ರಂತೆ ಆಹಾರಕ್ಕಾಗಿ ಖರ್ಚು ಮಾಡಲಂ ಸರ್ಕಾರದ ಆದೇಶವಿದೆ.

ಶ್ರೀ ಆರ್. ಎನ್. ನಾಯಕ್.—ಈ ಸರ್ಕಾರ ೧೯೮೬ನೇ ಇಸವಿಯಿಂದ ಪ್ರತಿ ವರ್ಷ ೧೦೦ ವಿದ್ಯಾರ್ಥಿನಿಲಯಗಳನ್ನು ಕೊಡುತ್ತೇವೆಂದು ಹೇಳಿತ್ತು. ೧೦೦ ಹೋಗಲಿ ೨೫ ಅನ್ನೂ ಕೊಡಲಿಕ್ಕೆ ಸಾಧ್ಯವಾಗಿಲ್ಲ. ಇವರು ಕೊಟ್ಟಿರುವಕ್ಕ ಅಂಕಿಅಂಶಗಳ ಪ್ರಕಾರವೇ ಹೇಳುವುದಾದರೆ, ೨ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ಮಾತ್ರ ಪ್ರಾರಂಭ ಮಾಡಿದ್ದಾರೆ. ಜನತಾ ಸರ್ಕಾರ, ಆಳುವ ಪಕ್ಷದ ಸರ್ಕಾರ ಏನು ಹೇಳುತ್ತಾ ಬಂದಿತ್ತು, ಅದನ್ನು ಪೂರೈಸುವುದಕ್ಕೆ ಇವರು ಸೋತಿದ್ದಾರೆ ಎನ್ನುವುದನ್ನು ಒಪ್ಪಿಕೊಳ್ಳುತ್ತೀರಾ ಹೇಗೆ ? ಅಥವಾ ಈ ರೀತಿ ನೀವು ಹೇಳಿದ್ದನ್ನು ಮಾಡದೇ ಇರುವುದಕ್ಕೆ ನಿರ್ದಿಷ್ಟ ಹಣ ಇಲ್ಲವೋ ಏನು ಕಾರಣ ಎಂಬುದನ್ನು ವಿವರಿಸಬೇಕು. ಇನ್ನೊಂದು ಇಲ್ಲಿ ನೂರು ರೂಪಾಯಿಗಳನ್ನು ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯದಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ನೂರು ರೂಪಾಯಿ ಮತ್ತು ಅದರ ನಂತರ ವಿದ್ಯಾರ್ಥಿಗಳಿಗೆ ೧೫೦ ರೂಪಾಯಿ ಖರ್ಚು ಮಾಡುತ್ತಿದ್ದೀರಿ. ಈ ನೂರು ರೂಪಾಯಿಯನ್ನು ತಾವು ಏನಂ ಖರ್ಚು ಮಾಡುತ್ತಿದ್ದೀರಿ ಅದನ್ನು ಯಾವ ಸಾಲಿನಿಂದ ಮಾಡುತ್ತಿದ್ದೀರಿ? ಈಗ ಖರ್ಚಿನ ಬಾಬ್ತು ಹೆಚ್ಚಿತ್ತಿರುವುದರಿಂದ ಆ ನೂರು ರೂಪಾಯಿಯ ಮಟ್ಟವನ್ನು ತಾವು ಇನ್‌ಕ್ರೀಸ್ ಮಾಡುತ್ತೀರಾ ಎಂಬುದನ್ನು ಹೇಳಬೇಕು.

ಶ್ರೀ ಪಿ.ಜಿ.ಆರ್ ಸಿಂಧ್ಯ.—ಇವತ್ತು ಬಿ.ಸಿ.ಎಂ. ಹಾಸ್ಟೆಲ್‌ಗಳಾಗಲೀ, ಎಸ್.ಸಿ. ಹಾಸ್ಟೆಲ್‌ಗಳಾಗಲೀ ಹೆಚ್ಚಿನ ಸಂಖ್ಯೆಯನ್ನು ಪ್ರಾರಂಭ ಮಾಡಲಿಕ್ಕೆ ಆಗದೇ ಇರುವುದಕ್ಕೆ ಬಹಳ ಮುಖ್ಯವಾದ ಕಾರಣ ಹಣ. ನಾವು ಹಾಸ್ಟೆಲ್‌ನ್ನು ಪ್ರಾರಂಭ ಮಾಡಿದರೆ ನೂರಂ ವಿದ್ಯಾರ್ಥಿಗಳಿಗೆ ವರ್ಷಕ್ಕೆ ಮೂರು ಲಕ್ಷ ಅಥವಾ ಲಕ್ಷ ರೂಪಾಯಿಗಳವರೆಗೆ ಖರ್ಚು ಬರುತ್ತದೆ. ಆ ಕಾರಣಕ್ಕೋಸ್ಕರವಾಗಿ

ಪ್ರಾರಂಭ ಮಾಡಲಿಕ್ಕೆ ತಡೆಯಾಗಿರುವುದು ನಿಜ. ಮಾನ್ಯ ಹಿಂದಿನ ಮುಖ್ಯ ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಎರಡು ನೂರು ಹೊಸದಾಗಿರತಕ್ಕಂಥ ವಿದ್ಯಾರ್ಥಿನಿಲಯಗಳನ್ನು ರಾಜ್ಯದಲ್ಲಿ ಪ್ರಾರಂಭ ಮಾಡತಕ್ಕಂಥ ಆಶ್ವಾಸನೆಯಂನ್ನು ಕೊಟ್ಟಿದ್ದಾರೆ. ಅದನ್ನು ಈ ವರ್ಷ ಕಾರ್ಯಗತ ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಜೊತೆಗೆ ನೂರು ರೂಪಾಯಿ ಮತ್ತು ೧೫೦ ರೂಪಾಯಿಗಳನ್ನು ನಾವು ವಿದ್ಯಾರ್ಥಿಗಳಿಗೆ ಪೂರ್ವ ಮೆಟ್ರಿಕ್ ಮತ್ತೆ ಮೆಟ್ರಿಕ್ ನಂತರದ ಒಂದು ವಿದ್ಯಾರ್ಥಿಗಳಿಗೆ ಕೊಡುತ್ತಿರತಕ್ಕಂಥ ಹಣವನ್ನು ಹೆಚ್ಚು ಮಾಡಬೇಕು ಎನ್ನುವ ಸಲಹೆ ಈಗಾಗಲೇ ಸರ್ಕಾರದ ಪರಿಶೀಲನೆಯಲ್ಲಿದೆ, ಅದನ್ನು ಹೆಚ್ಚು ಮಾಡಲಿಕ್ಕೆ ಆದಷ್ಟು ಬೇಗ ಪ್ರಯತ್ನವನ್ನು ಮಾಡುತ್ತೇವೆ.

ಬುಡಂಬುಡುಕೆ ಮಂತ್ರ ಸಿಳ್ಳೇಕ್ಯಾತ ಜಾತಿಗಳನ್ನು ''ಎ'' ಗ್ರೂಪ್‌ಗೆ ಸೇರಿಸುವುದು

೨೯೭೫. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ) ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಅತಿ ಅಲ್ಪಸಂಖ್ಯೆಯಲ್ಲಿರುವ ಅಲೆಮಾರಿ ಜನಾಂಗವಾದ ಬುಡುಬುಡಿಕೆ ಸಿಳ್ಳೇಕ್ಯಾತ ಜಾತಿಗಳನ್ನು 'ಎ' ಗ್ರೂಪಿಗೆ ಸೇರಿಸುವ ಬದಲು 'ಬಿ' ಗ್ರೂಪ್‌ಗೆ ಸೇರಿಸಿರುವುದು ಸರ್ಕಾರ ದಮರ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಈ ಅಲೆಮಾರಿ ಜನಾಂಗಕ್ಕೆ ಅನ್ಯಾಯ ಮಾಡಿದಂತಾಗಿಲ್ಲವೆ, ಹಾಗೂ ಈ ಬಗ್ಗೆ ಕ್ರಮ ಕೈಗೊಳ್ಳುವರೆ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಮಾಜ ಕಲ್ಯಾಣ ಸಚಿವರು).—

(ಅ) ಬುಡುಬುಡುಕೆ ಜಾತಿಯನ್ನು ದಿನಾಂಕ ೧೫-೧೦-೧೯೮೬ ಸರ್ಕಾರಿ ಆದೇಶ ಸಂಖ್ಯೆ/ ಎಸ್‌ಡಬ್ಲ್ಯೂಎಲ್ ೬೬ ಬಿಸಿವಿ ೮೬ ಅನ್ವಯ 'ಎ' ಗುಂಪಿಗೆ ಸೇರಿಸಲಾಗಿದೆ. ಸಿಳ್ಳೇಕ್ಯಾತ ಜಾತಿಯನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸಲಾಗಿದೆ.

(ಆ) ಉದ್ಭವಿಸಿಲ್ಲ.

ಅಧ್ಯಕ್ಷರು.—ಮಾನ್ಯ ಲಕ್ಕಪ್ಪನವರೇ, ನಿಮ್ಮ ಬಡಂಬಡುಕೆ ಪ್ರಶ್ನೆಗೆ ಸಪ್ಲಿಮೆಂಟರಿ ಕೇಳಿ.

ಶ್ರೀ ಕೆ. ಲಕ್ಕಪ್ಪ.—ನನ್ನದು ಬಡಂಬಡುಕೆ ಪ್ರಶ್ನೆ ಅಲ್ಲ. ಬಡುಬಡುಕೆ ಜನಾಂಗಕ್ಕೆ ಸೇರಿದ ಪ್ರಶ್ನೆ.

ಅಧ್ಯಕ್ಷರು.—ನೀವು ಬುಡುಬುಡಿಕೆ ಎಂದು ಹೇಳಲಿಲ್ಲ. ಬುಡುಬುಡಿಕೆಯ ಪ್ರಶ್ನೆ ಕೇಳಿ ಎಂದು ಹೇಳಿದೆ.

ಶ್ರೀ ಕೆ. ಲಕ್ಕಪ್ಪ.—ನಾನೂ ಬುಡಂಬುಡಿಕೆ ಅಲ್ಲ, ಪ್ರಶ್ನೆಯೂ ಬುಡಂಬುಡಿಕೆ ಅಲ್ಲ.

ಶ್ರೀ ಪುಲ್ಲಾರಿ ಗೌಡ ಎಸ್. ಪಾಟೀಲ್.—ನಾವು ಬುಡುಬುಡಿಕೆ ಆದರೆ ನೀವು ಬುಡುಬುಡಿಕೆಯ ಅಧ್ಯಕ್ಷರು ಆಗುತ್ತೀರಿ...

ಅಧ್ಯಕ್ಷರು.—ನಾನು ಹೇಳಿದೆನಲ್ಲಾ. ನೀವು ಬುಡುಬುಡಿಕೆ ಅಲ್ಲ, ನಾನೂ ಅಲ್ಲ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಈ ಸಿಳ್ಳೇಕ್ಯಾತ, ಕಿಳ್ಳೇಕ್ಯಾತ ಎಲ್ಲಾ ಒಂದೇ ಜಾತಿ ಅಲ್ಲ. ಇಲ್ಲಿ ಏನು ಆಗಿದೆ ಅಂದರೆ ಗ್ರೂಪ್ ವೈಸ್ ವಿಂಗಡಣೆ ಮಾಡುವಾಗ ಈ ಜನಾಂಗವನ್ನು ಸಿಳ್ಳೇಕ್ಯಾತ ಕಿಳ್ಳೇಕ್ಯಾತ ಎಂದು ತೋರಿಸಿದ್ದಾರೆ ಆದರೆ ಬುಡುಬುಡಿಕೆ ಸೇರಿಸಿಲ್ಲ. ಇವರು ಇದರ ಬಗ್ಗೆ ಒಂದು ಮನವಿಯನ್ನು ಕೊಟ್ಟಿದ್ದಾರೆ. ಹಿಂದೆ ನಾನು ಹಿರಿಯರ ಕೆಳಗಡೆ ಪ್ರಶ್ನೆ ಕೇಳಿದಾಗ ಈ ಜನಾಂಗವನ್ನು ಹಿಂದುಳಿದ ವರ್ಗಗಳ ಆಯೋಗಕ್ಕೆ ಶಿಫಾರಸ್ಸು ಮಾಡಿ ಸೇರಿಸುತ್ತೇವೆಂದು ಹೇಳಿದ್ದರು. ಈಗ ಹಿಂದುಳಿದ ವರ್ಗಕ್ಕೆ ಈ ಜನಾಂಗವನ್ನು ಸೇರಿಸಿರುವುದಾಗಿ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಯಾವಾಗ ಸೇರಿಸಿದ್ದೀರಂದು ಕೇಳಲಾಗಿ ೧೫-೧೦-೧೯೮೬ರಲ್ಲಿ ಸೇರಿಸಲಾಗಿದೆ ಎಂದು ಹೇಳಿದ್ದಾರೆ, ಅದಕ್ಕಾಗಿ ಮಾನ್ಯ ಸಚಿವರಿಗೆ ನನ್ನ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಆದರೆ ಹಾಸ್ಟೆಲ್‌ಗಳಿಗೆ ಸೀಟು